## ಮಹಿಳಾ ಅಭಿವೃದ್ಧಿ ನಿಗಮ

ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಮಾಜಿ ದೇವದಾಸಿಯರನ್ನು ಸಬಲೀಕರಣಗೊಳಿಸಲು ಆದಾಯೋತ್ಪನ್ನಕರ ಚಟುವಟಿಕೆಯಡಿ ನಿಗಮದಿಂದ ನೇರವಾಗಿ ೨೦,೦೦೦ ರೂ.ಗಳ ಸಹಾಯಧನದ ಸೌಲಭ್ಯವನ್ನು ಮಾಜಿ ದೇವದಾಸಿಯರಿಗೆ ಕಲ್ಪಿಸಿದೆ. ಜಾತ್ರಾ ಜಾಗೃತಿ ಹಾಗೂ ಬೀದಿ ನಾಟಕಗಳ ಮೂಲಕ ಈ ಪದ್ಧತಿಯನ್ನು ನಿರ್ಮೂಲನೆಗೊಳಿಸಲು ಪ್ರಚಾರ ಕೈಗೊಳ್ಳಲಾಗುತ್ತಿದೆ. ಮಾಜಿ ದೇವದಾಸಿಯರ ಆರೋಗ್ಯ ದೃಷ್ಟಿಯಿಂದ ಸರ್ಕಾರಿ ಆರೋಗ್ಯ ಕೇಂದ್ರಗಳ ಮೂಲಕ ಆರೋಗ್ಯ ಶಿಬಿರಗಳನ್ನು ಏರ್ಪಡಿಸಲಾಗುತ್ತಿದೆ. ೨೦೧೫೧೬ನೇ ಸಾಲಿನಲ್ಲಿ ೩೦೭೮ ಮಾಜಿ ದೇವದಾಸಿಯವರಿಗೆ ರೂ.೮೫೦.೦೦ ಲಕ್ಷ ಮೊಬಲಗನ್ನು ವಿವಿಧ ಚಟುವಟಿಕೆಗಳಿಗೆ ಖರ್ಚು ಮಾಡಲಾಗಿದೆ.

ನಿವೇಶನವುಳ್ಳ ವಸತಿ ರಹಿತ ಮಾಜಿ ದೇವದಾಸಿಯರಿಗಾಗಿ ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮದ ಮೂಲಕ ಮನೆಗಳನ್ನು ನಿರ್ಮಿಸಿಕೊಡಲಾಗುತ್ತಿದೆ. ೨೦೧೫೧೬ನೇ ಸಾಲಿನಲ್ಲಿ ೭೮೮ ಮನೆಗಳನ್ನು ನಿರ್ಮಿಸಲು ೧೨೦೦ ಲಕ್ಷ ರೂ.ಗಳನ್ನು ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ ಪಾವತಿಸಲಾಗಿದೆ. ೪೫ ವರ್ಷ ಮೀರಿದ ಮಾಜಿ ದೇವದಾಸಿಯರಿಗೆ ಕನಿಷ್ಠ ಜೀವನ ನಡೆಸಲು ಸಹಕಾರಿಯಾಗುವಂತೆ ನೀಡುವ ಮಾಸಾಶನವನ್ನು ೧೦೦೦ ರೂ.ಗಳಿಗೆ ಏರಿಕೆ ಮಾಡಿದೆ. ೨೦೧೫೧೬ ನೇ ಸಾಲಿನಲ್ಲಿ ೨೭,೮೮೯ ಮಾಜಿ ದೇವದಾಸಿಯರಿಗೆ ಮಾಸಾಶನ ನೀಡಿದೆ.

ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳ ಸುಸ್ಥಿರತೆ, ಸಬಲೀಕರಣಕ್ಕಾಗಿ ಸ್ತ್ರೀಶಕ್ತಿ ಗುಂಪುಗಳಿಗೆ ನೀಡುವ ಕಿರು ಸಾಲ ಮೊತ್ತವನ್ನು ೨೦೧೫೧೬ ನೇ ಸಾಲಿನಿಂದ ೧ ಲಕ್ಷ ರೂ.ಗಳಿಂದ ೨ ಲಕ್ಷ ರೂ.ಗಳಿಗೆ ಹೆಚ್ಚಿಸಿದೆ. ಅಲ್ಲದೆ, ಈ ಸಾಲವನ್ನು ಬಡ್ಡಿ ರಹಿತವಾಗಿ ನೀಡುತ್ತಿದೆ.

ಲಿಂಗತ್ವ ಅಲ್ಪಸಂಖ್ಯಾತರು ಹಾಗೂ ವೃತ್ತಿ ನಿರತ ಲೈಂಗಿಕ ಕಾರ್ಯಕರ್ತೆ ಮಹಿಳೆಯರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ೨೦,೦೦೦ ರೂ.ಗಳ ಪ್ರೋತ್ಸಾಹಧನ ನೀಡುತ್ತಿದೆ. ೨೦೧೫೧೬ನೇ ಸಾಲಿನಲ್ಲಿ ೧೦೦ ಲಿಂಗ ಅಲ್ಪಸಂಖ್ಯಾತರಿಗೆ ಹಾಗೂ ಲೈಂಗಿಕ ಕಾರ್ಯಕರ್ತೆಯರಿಗೆ ತಲಾ ೨ ಕೋಟಿ ರೂ.ಗಳ ಸೌಲಭ್ಯ ನೀಡಿದೆ. ■

# ಗಾಂಧೀಜಿ ಚಿಂತನೆಯ ಬಿತ್ತನೆ



ವಾರ್ತಾ ಇಲಾಖೆಯ 'ವಾರ್ತಾಸೌಧ'ದಲ್ಲಿರುವ 'ಗಾಂಧಿ ಅಂಗಣ'ದಲ್ಲಿ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರು ಮಹಾತ್ಮಾ ಗಾಂಧೀಜಿಯವರ ಪುತ್ಥಳಿ ಅನಾವರಣಗೊಳಿಸುತ್ತಿರುವುದು.

ರಾಜ್ಯದ 30 ಜಿಲ್ಲೆಗಳಲ್ಲಿ ತಲಾ ಮೂರು ಕೋಟಿ ರೂ.ಗಳ ವೆಚ್ಚದಲ್ಲಿ ಮಹಾತ್ಮಾ ಗಾಂಧೀಜಿಯವರ ಆಶಯಗಳನ್ನು ಮುಂದಿನ ಪೀಳಿಗೆಗೆ ತಲುಪಿಸಲು ಅನುಕೂಲವಾಗುವಂತೆ ಗಾಂಧಿಭವನ ನಿರ್ಮಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಕರ್ನಾಟಕ ಸರ್ಕಾರವು ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರ ಜೀವನ, ಸಂದೇಶ ಮತ್ತು ತತ್ವ– ಚಿಂತನೆಗಳ ಬಗ್ಗೆ ಯುವ ಜನಾಂಗದಲ್ಲಿ ಅರಿವು ಮೂಡಿಸಲು ವಿಶೇಷ ಯೋಜನೆಗಳನ್ನು ರೂಪಿಸಿದೆ. ವಾರ್ತಾ ಮತ್ತು ಸಾರ್ವಜನಿಕ ಇಲಾಖೆಯನ್ನು ಈ ದಿಶೆಯಲ್ಲಿ ಸರ್ಕಾರದ ಸಮನ್ವಯ ಇಲಾಖೆಯನ್ನಾಗಿ ನೇಮಿಸಿದೆ. ಬೆಂಗಳೂರಿನಲ್ಲಿರುವಂತೆ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಒಂದೊಂದು 'ಗಾಂಧಿಭವನ' ನಿರ್ಮಿಸಲಿದೆ. ಆದಕ್ಕಾಗಿ ಪ್ರತಿ ಜಿಲ್ಲೆಗೆ 3 ಕೋಟಿ ರೂಗಳಂತೆ 90 ಕೋಟಿ ರೂಗಳ ಅನುದಾನ ಒದಗಿಸಲಿದೆ.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಗಾಂಧೀಜಿಯವರ ಕುರಿತು ವಿಶೇಷ ಕಿರುಹೊತ್ತಿಗೆ, ಮಾಹಿತಿಪತ್ರ, ಪಾಕೇಟ್ ಕ್ಯಾಲೆಂಡರ್ ರೂಪದಲ್ಲಿ ಆಸಕ್ತಿದಾಯಕ ಪ್ರಕಟಣೆಗಳನ್ನು ಹೊರತಂದಿದೆ. ಅವುಗಳನ್ನು ರಾಜ್ಯದ ಶಾಲಾ ಕಾಲೇಜುಗಳಿಗೆ, ಗ್ರಾಮ ಪಂಚಾಯತಿಗಳಿಗೆ ವಿತರಿಸುತ್ತಿದೆ.

ಗಾಂಧೀಜಿಯವರ ಚಿಂತನೆಗಳನ್ನು ಮುಂದಿನ ಪೀಳಿಗೆಗೂ ತಲುಪಿಸುವ ಸರ್ಕಾರದ ಆಶಯಗಳನ್ನು ಸಾರ್ಥಕಗೊಳಿಸಲು ವಾರ್ತಾ ಇಲಾಖೆ ಶ್ರಮಿಸುತ್ತಿದೆ. ■